ಒಂದೂವರೆ ದಶಕ ಕರ್ನಾಟಕ ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ವಿನಯ್ ಈಗ ದೇಶಿ ಟೂರ್ನಿಗಳಲ್ಲಿ ರಾಜ್ಯ ತಂಡವನ್ನು ತೊರೆದಿದ್ದು, ಪುದುಚೇರಿ ಪರ ಆಡಲಿದ್ದಾರೆ. ಎರಡು ದಶಕದ ಕ್ರಿಕೆಟ್‌ನಲ್ಲಿನ ಅನುಭವದಿಂದ ಅಲ್ಲಿನ ಕ್ರಿಕೆಟ್ ಸಂಸ್ಥೆ ಅವರನ್ನು ತಂಡಕ್ಕೆ ಆಟಗಾರನ ಜೊತೆ ಸಲಹೆಗಾರನನ್ನಾಗಿಯೂ ನೇಮಿಸಿದೆ. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಸಿ.ಎಂ. ಗೌತಮ್, ಆಲ್‌ರೌಂಡರ್ ಸ್ಟುವರ್ಟ್ ಬಿನ್ನಿ ಕೂಡ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಿಂದ (ಕೆಎಸ್‌ಸಿಎ) ನಿರಕ್ಷೇಪಣಾ ಪತ್ರ ಬರೆದಿದ್ದಾರೆ. ವಿಭಿನ್ನ ಬ್ಯಾಟಿಂಗ್ ಶೈಲಿಯ ಮೂಲಕ ಛಾಪು ಮೂಡಿಸಿದ್ದ 'ಆಪದ್ಬಾಂಧವ' ಗೌತಮ್ ಗೋವಾ ತಂಡ ಸೇರಿಕೊಂಡಿದ್ದಾರೆ.

ಪ್ರತಿ ವರ್ಷ ದೇಶಿ ಕ್ರಿಕೆಟ್ ಋತು ಆರಂಭವಾಗುವ ಒಂದೆರೆಡು ತಿಂಗಳು ಮೊದಲು ತಂಡಗಳನ್ನು ಬದಲಿಸುವುದು, ಹೊಸ ಅವಕಾಶಗಳಿಗಾಗಿ ಕೈ ಚಾಚುವುದು ಸಹಜ. ಇದು ಎಲ್ಲ ರಾಜ್ಯಗಳಲ್ಲಿಯೂ ನಡೆಯುತ್ತದೆ. ಹಿಂದೆ ಕರ್ನಾಟಕದಿಂದ ಜೆ. ಅರುಣ್ ಕುಮಾರ್ (ಅಸ್ಸಾಂ ಹಾಗೂ ಗೋವಾ), ಗಣೇಶ ಸತೀಶ (ವಿದರ್ಭ), ಕೆ.ಬಿ. ಪವನ್ (ಕೇರಳ, ಅಸ್ಸಾಂ, ಗೋವಾ), ರೋನಿತ್ ಮೋರೆ (ಹಿಮಾಚಲ ಪ್ರದೇಶ), ರಾಬಿನ್ ಉತ್ತಪ್ಪ (ಸೌರಾಷ್ಟ್ರ), ದೀಪಕ್ ಚೌಗುಲೆ (ಜಾರ್ಖಂಡ್) ಹೀಗೆ ಅನೇಕ ಆಟಗಾರರು ಬೇರೆ ರಾಜ್ಯಗಳ ಪರ ಆಡಿದ್ದಾರೆ.

ಆದರೆ, ಕರ್ನಾಟಕದ ಕ್ರಿಕೆಟ್ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತೆ ಮಾಡಿದ ಆಟಗಾರರು ಈ ವರ್ಷ ಹೊರರಾಜ್ಯಗಳತ್ತ ಮುಖಮಾಡಿದ್ದಾರೆ. 'ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುವ ಉದ್ದೇಶದಿಂದ ಬೇರೆ ತಂಡಕ್ಕೆ ಹೋಗುತ್ತಿದ್ದೇನೆ' ಎಂದು ವಿನಯ್ ಹೇಳಿದ್ದಾರೆ. ಆದ್ದರಿಂದ 'ಗೋಲ್ಡನ್ ಟೀಮ್' ದಿನಗಳು ಇನ್ನು ನೆನಪು ಮಾತ್ರ.

## ಚಾಂಪಿಯನ್ ಆದ ನೆನಪು

ಎಲ್ಲ ವಿಭಾಗಗಳಲ್ಲಿ ಬಲಿಷ್ಠವಾಗಿದ್ದರೂ ದೇಶಿ ಟೂರ್ನಿಗಳಲ್ಲಿ ಪ್ರತಿಷ್ಠಿತ ಎನಿಸಿದ್ದ ರಣಜಿಯಲ್ಲಿ ಕರ್ನಾಟಕ ತಂಡ ನಿರಂತರವಾಗಿ ಪ್ರಶಸ್ತಿಯ ಬರ ಎದುರಿಸಿತ್ತು. 1998–99ರಲ್ಲಿ ಸುನಿಲ್ ಜೋಶಿ ನಾಯಕತ್ವದಲ್ಲಿ ರಾಜ್ಯ ತಂಡ ಮಧ್ಯಪ್ರದೇಶವನ್ನು ಮಣಿಸಿ ರಣಜಿ ಚಾಂಪಿಯನ್ ಆಗಿತ್ತು. ಇದಾದ ಬಳಿಕ ಪ್ರಶಸ್ತಿ ಗೆಲ್ಲಲು 14 ವರ್ಷ ಕಾಯಬೇಕಾಯಿತು.

ಪ್ರತಿ ವರ್ಷ ಟೂರ್ನಿ ಆರಂಭದ ದಿನಗಳಲ್ಲಿ ರಾಜ್ಯ ತಂಡದ ಆಟಗಾರರು ಮತ್ತು ಕೋಚ್‌ಗಳು 'ಈ ವರ್ಷ ಕಪ್ ನಮ್ಮದೇ' ಎನ್ನುತ್ತಿದ್ದರು. ಅನೇಕ ಬಾರಿ ಲೀಗ್ ಹಂತದಲ್ಲಿ, ನಾಕೌಟ್‌ನಲ್ಲಿ ಮುಗ್ಗರಿಸುತ್ತಿದ್ದರು. ಹೀಗೆ ಸತತವಾಗಿ ನಿರಾಸೆ ಕಾಡುತ್ತಲೇ ಹೋಯಿತು. ಅನೇಕ ಕ್ರಿಕೆಟ್ ಪ್ರೇಮಿಗಳು ರಾಜ್ಯ ತಂಡದ ಮೇಲೆ ಭರವಸೆ ಕಳೆದುಕೊಂಡಿದ್ದರು. ಆದರೆ ಹೊಸ ಹುಡುಗರು ಟ್ರೋಫಿ ಗೆಲ್ಲಲು ನಿರಂತರ ಹೋರಾಟ ಮಾಡುತ್ತಲೇ ಇದ್ದರು. ವಿನಯ್ ನಾಯಕತ್ವದಲ್ಲಿ ಈ ಕನಸು ಸಾಕಾರಗೊಂಡಿತು.

ಅದು 2014ರ ಫೆ. 2. ಹೈದರಾಬಾದ್‌ನಲ್ಲಿ ನಡೆದ ರಣಜಿ ಫೈನಲ್‌ನಲ್ಲಿ ಕರ್ನಾಟಕ ತಂಡ ಮಹಾರಾಷ್ಟ್ರವನ್ನು ಮಣಿಸಿ ಪ್ರಶಸ್ತಿಯ ಬರ ನೀಗಿಸಿಕೊಂಡಿತ್ತು. ಈ ಯಶಸ್ಸಿನಲ್ಲಿ ವಿನಯ್, ರಾಬಿನ್ ಉತ್ತಪ್ಪ, ಸಿ.ಎಂ. ಗೌತಮ್, ಸ್ಟುವರ್ಟ್ ಬಿನ್ನಿ, ಗಣೇಶ ಸತೀಶ ಮತ್ತು ಅಮಿತ್ ವರ್ಮಾ ಅವರ ಪಾತ್ರ ಪ್ರಮುಖವಾಗಿತ್ತು. ಈಗ ಈ ಎಲ್ಲ ಆಟಗಾರರು ಬೇರೆ ರಾಜ್ಯಗಳ ತಂಡಗಳಲ್ಲಿದ್ದಾರೆ.

ವಿನಯ್ ನಾಯಕತ್ವದಲ್ಲಿ ಚೊಚ್ಚಲ ಟ್ರೋಫಿ ಗೆದ್ದ ಬಳಿಕ ಕರ್ನಾಟಕ ತಂಡ ಸತತ ಎರಡು ವರ್ಷಗಳ ಬಳಿಕ ಒಂಟಿಸಲಗದಂತೆ ಪ್ರಶಸ್ತಿಗಳನ್ನು ಬೇಟೆಯಾಡುತ್ತಲೇ ಹೋಯಿತು. ಮರುವರ್ಷವೇ ತಮಿಳುನಾಡು ತಂಡವನ್ನು ಮಣಿಸಿ ಸತತ ಎರಡನೇ ರಣಜಿ ಟ್ರೋಫಿ ಗೆದ್ದುಕೊಂಡಿತು. ಒಟ್ಟು ಎರಡು ವರ್ಷಗಳ ಅವಧಿಯಲ್ಲಿ ಎರಡು ರಣಜಿ, ಇರಾನಿ ಮತ್ತು ವಿಜಯ ಹಜಾರೆ ಟೂರ್ನಿಯಲ್ಲಿ ಒಟ್ಟು ಆರು ಪ್ರಶಸ್ತಿಗಳನ್ನು ಗೆದ್ದುಕೊಂಡಿತ್ತು. ಈ ಎಲ್ಲ ಸಾಧನೆಗೆ ಶಕ್ತಿಯಾಗಿ ನಿಂತು ಯುವ ಆಟಗಾರರಲ್ಲಿ ವಿನಯ್ ಸ್ಫೂರ್ತಿ ತುಂಬಿದರು.



ಸಿ.ಎಂ. ಗೌತಮ್

ಸಮರ್ಥವಾಗಿ ರಾಜ್ಯ ತಂಡವನ್ನು ಕಟ್ಟುವಲ್ಲಿ ವಿನಯ್ ಪ್ರಮುಖ ಪಾತ್ರ ವಹಿಸಿದರು. ನಿರಂತರವಾಗಿ ತಾವೊಬ್ಬರೇ ಆಡುವ ಬದಲು ಅವಕಾಶ ಸಿಕ್ಕಾಗಲೆಲ್ಲ ಹೊಸ ಆಟಗಾರರನ್ನು ಕಣಕ್ಕಿಳಿಸುತ್ತಿದ್ದರು.

ಇದರಿಂದ ರಾಜ್ಯ ತಂಡದಲ್ಲಿ 2014ರಿಂದ ಈವರೆಗೆ ಜೆ. ಸುಚಿತ್, ಡೇವಿಡ್ ಮಥಾಯಿಸ್, ಅಭಿಷೇಕ ರೆಡ್ಡಿ, ಮೀರ್ ಕೌನೇನ್ ಅಬ್ಬಾಸ್, ಪವನ ದೇಶಪಾಂಡೆ, ಅರ್ಜುನ ಹೊಯ್ಸಳ, ಡಿ. ನಿಶ್ಚಲ್, ಪ್ರಸಿದ್ಧ ಕೃಷ್ಣ, ಬಿ.ಆರ್. ಶರತ್, ಕೆ.ವಿ. ಸಿದ್ಧಾರ್ಥ್, ದೇವದತ್ ಪಡಿಕ್ಕಲ್, ಎಸ್. ಶರತ್, ಪ್ರತೀಕ್ ಜೈನ್, ಲಿಯಾನ್ ಖಾನ್ ಮತ್ತು ಶುಭಾಂಗ್ ಹೆಗ್ಡೆ ಹೊಸ ಭರವಸೆಯಾಗಿ ಗೋಚರಿಸಿದರು.

ಕೆಎಸ್‌ಸಿಎ ಕೂಡ ನಿರಂತರವಾಗಿ ಪ್ರಯೋಗಗಳನ್ನು ಮಾಡುತ್ತ ಹೊಸಬರಿಗೆ ಅವಕಾಶಗಳನ್ನು ಕೊಡುತ್ತಲೇ ಇದೆ. ವಿನಯ್ ಕುಮಾರ್ ಅನುಪಸ್ಥಿತಿಯಲ್ಲಿದ್ದಾಗ ಕರುಣ್ ನಾಯರ್, ಸಿ.ಎಂ. ಗೌತಮ್, ಮನೀಷ ಪಾಂಡೆ ಅವರಿಗೆ ನಾಯಕತ್ವ ಜವಾಬ್ದಾರಿ ನೀಡಿ ಹೊಸಬರನ್ನು ಸಿದ್ಧಗೊಳಿಸಿತ್ತು. ಇದರಿಂದ ಕಳೆದ ಆರೇಳು ವರ್ಷಗಳಲ್ಲಿ ಕೆ.ಎಲ್. ರಾಹುಲ್, ಮನೀಷ್ ಪಾಂಡೆ, ಎಸ್. ಅರವಿಂದ್, ಕರುಣ್ ನಾಯರ್ ರಾಷ್ಟ್ರೀಯ ತಂಡದಲ್ಲಿ ಅವಕಾಶ ಪಡೆದುಕೊಂಡರು. ಅನುಭವಿ ಆಟಗಾರರು ಹೊರ ಹೋಗುವುದು, ಹೊಸಬರು ಬರುವುದು ನಿರಂತರ ಪ್ರಕ್ರಿಯೆ. ಆದ್ದರಿಂದ ಕೆಎಸ್‌ಸಿಎ ಕೂಡ ಭವಿಷ್ಯದ 'ಗೋಲ್ಡನ್' ತಂಡ ಕಟ್ಟುವ ಸಲುವಾಗಿ ನಿರಂತರವಾಗಿ ಹೊಸ ಆಟಗಾರರನ್ನು ಶೋಧಿಸುತ್ತಲೇ ಇದೆ. ಕರ್ನಾಟಕದ ಕ್ರಿಕೆಟ್‌ನಲ್ಲಿ ನವ ಮನ್ವಂತರಕ್ಕೆ ನಾಂದಿ ಹಾಡಲಾಗಿದೆ.



ಸ್ಟುವರ್ಟ್ ಬಿನ್ನಿ